ESI.A.No. 97-2022

AW-1,

ದಿನಾಂಕಃ 17-07-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಪಾಟೀ ಸವಾಲುಃ- ಎದುರುದಾರರ ಪರವಾಗಿಃಶ್ರೀ. ಎಸ್ ಡಬ್ಲ್ಯೂಕೆ ವಕೀಲರಿಂದ ಃ

ನಮ್ಮ ಸಂಸ್ಥೆಯು ಲೇಬರ್ ಕಾಂಟ್ರಾಕ್ಟ್ ಕೆಲಸ ಮಾಡುತ್ತದೆ. 2017 ರಿಂದ ಸದರಿ ಸಂಸ್ಥೆಯು ಅಸ್ತಿತ್ವದಲ್ಲಿದೆ . 2017 ರಲ್ಲಿ ನಾನೇ ಖುದ್ದಾಗಿ ಎದುರುದಾರರಿಂದ ಇ ಎಸ್ ಐ ಕೋಡ್ ಪಡೆದುಕೊಂಡಿರುತ್ತೇನೆ ಎಂದರೆ ಸರಿ . ಆ ಕಾಲಕ್ಕೆ ನಮ್ಮ ಸಂಸ್ಥೆಯಲ್ಲಿ 20 ಜನ ಕೆಲಸಗಾರರು ಇದ್ದಾರೆ ಎಂದು ತೋರಿಸಿರುತ್ತೇನೆ ಎಂದರೆ ಸರಿ . ಆಗ ಎದುರುದಾರರು 21.08.2017 ರಂದು ಇ ಎಸ್ ಐ ಕೋಡ್ ಮತ್ತು ಇತರ ವಿವರಗಳನ್ನು ಕಳುಹಿಸಿಕೊಟ್ಟಿರುತ್ತಾರೆ ಎಂದರೆ ಸರಿ . ಇ ಎಸ್ ಐ ಕೋಡ್ ನ್ನು ಪಡೆದ ನಂತರ ವಂತಿಗೆಯನ್ನು ಪಾವತಿಸಿರುವುದಿಲ್ಲ ಎಂದರೆ ಸರಿ . ವಂತಿಗೆಯನ್ನು ಪಾವತಿಸದೇ ಇದ್ದುದರಿಂದ ಎದುರುದಾರರು ದಿಃ 15.01.2021 ರಂದು ಪತ್ರವನ್ನು ಬರೆದು ವಂತಿಗೆಯನ್ನು ಹೇಗೆ ಕಟ್ಟಬೇಕು ಹಾಗೂ ಎಷ್ಟು ದಿನಗಳಲ್ಲಿ ಕಟ್ಟಬೇಕು ಎಂಬುದರ ಬಗ್ಗೆ ಮಾಹಿತಿಯನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ಪತ್ರ ತಲುಪಿದ ನಂತರವು ನಾನು ವಂತಿಗೆಯನ್ನು ಕಟ್ಟಿರುವುದಿಲ್ಲ ಎಂದರೆ ಸರಿ . ಆದುದರಿಂ ದಿನಾಂಕ 08.04.2021 ರಂದು ಎದುರುದಾರರ ದಿನಾಂಕ 01.08.2017 ರಿಂ 28.02.2021 ರವರೆಗೆ ವಂತಿಗೆಯನ್ನು ಪಾವತಿಸಲು ಸಿ-18 ನೋಟೀಸನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ನೋಟೀಸಲ್ಲಿ ದಿನಾಂಕ 25.05.2021 ರಂದು ಖುದ್ದು ಸುನಾವಣೆಗೆ ಹಾಜರಾಗಿ Wage Register, Attendance Register, Cash Book and Balance Sheet ಅನ್ನು ಹಾಜರು ಪಡಿಸುವಂತೆ ಸೂಚಿಸಿರುತ್ತಾರೆ ಎಂದರೆ ಸರಿ . ಸದರಿ ಸುನಾವಣಾ ದಿನಾಂಕದಂದು ಹಾಜರಾಗದೇ ಇದ್ದುದರಿಂದ ಎದುರುದಾರರು ದಿನಾಂಕ 12.07.2021 ರಂದು ಖುದ್ದು ಸುನಾವಣೆಗೆ ಹಾಜರಾಗುವಂತೆ ಮತ್ತೊಂದು ನೊಟೀಸನ್ನು ನೀಡಿರುತ್ತಾರೆ ಎಂದರೆ ಸರಿ . ಸದರಿ ಸುನಾವಣೆಗೆ ಹಾಜಾರಾಗದೇ ಇದ್ದುದರಿಂದ ಎದುರುದಾರರು ದಿನಾಂಕ 30.07.2021 ರಂದು 530145/- ರೂಪಾಯಿಗಳ ವಂತಿಗೆಯನ್ನು ಕಟ್ಟುವಂತೆ ಸೆಕ್ಸನ್ - 45 ಎ ಅಡಿಯಲ್ಲಿ ಆದೇಶವನ್ನು ಹೊರಡಿಸಿರುತ್ತಾರೆ ಎಂದರೆ ಸರಿ . ಸದರಿ ಆದೇಶವನ್ನು ಪ್ರಶ್ನಿಸಿ ಸೆಕ್ಸನ್ 45-ಎ ಎ ಅಡಿಯಲ್ಲಿ ಮೇಲ್ಮನವಿಯನ್ನು ಸಲ್ಲಿಸಿರುವುದಿಲ್ಲ ಎಂದರೆ ಸರಿ . ನನ್ನ ಪ್ರಮಾಣ ಪತ್ರದಲ್ಲಿ ಹೇಳಿದಂತೆ ನಮ್ಮ ಸಂಸ್ಥೆಯಲ್ಲಿ ಕೇವಲ 3 ಜನ ಕೆಲಸಗಾರರು ಮಾತ್ರ ಇರುತ್ತಾರೆ ಎಂದು ಎದುರುದಾರರಿಗೆ ತಿಳಿಸಲು ನನಗೆ ತೊಂದರೆ ಇತ್ತು. ನಿ ಎ-3 ರ ಪ್ರಕಾರ ಅರ್ಜಿದಾರ ಸಂಸ್ಥೆ 20 ಜನ ಕೆಲಸಗಾರರಿಗೆ ಸಂಬಂಳವನ್ನು ನೀಡಿರುತ್ತದೆ ಎಂದರೆ ಸರಿ . ನಿ ಎ-3 ರಲ್ಲಿ ಸದರಿ ಕೆಲಸಗಾರರ ಸಹಿಯನ್ನು ಪಡೆದುಕೊಳ್ಳಲಾಗಿರುತ್ತದೆ ಎಂದರೆ ಸರಿ .

ಈ ನ್ಯಾಯಾಧೀಕರಣದ ಮುಂದೆ ನನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ Profit and Loss Account ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ನನ್ನ ವ್ಯವಹಾರಕ್ಕೆ ಸಂಬಂಧಿಸಿದಂತೆ ಸರ್ಕಾರದ ಬೇರೆ ಇಲಾಖೆಗಳಿಂದ ನಾನು ಲೈಸೆನ್ಸ್ ಪಡೆದುಕೊಂಡಿರುವುದಿಲ್ಲ, ಈ ನ್ಯಾಯಾಧೀಕರಣದ ಮುಂದೆ ನನಗೆ Profit and Loss Account Statement ಅನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ಸಂಸ್ಥೆ ಮುಚ್ಚುಹೋಗಿರುವುದರ ಬಗ್ಗೆ ಬೇರೆ ಯಾವುದೇ ದಾಖಲಾತಿಗಳನ್ನು ಈ ನ್ಯಾಯಾಧೀಕರಣದ ಮುಂದೆ ಹಾಜರು ಪಡಿಸಿರುವುದಿಲ್ಲ ಎಂದರೆ ಸರಿ . ವಂತಿಗೆ ಕಟ್ಟುವುದನ್ನು ತಪ್ಪಿಸುವ ಸಲುವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ .

ಮರು ವಿಚಾರಣೆಃ ಇಲ್ಲ

(ಸಾಕ್ಷಿಯು ಕೊಟ್ಟ ಸಾಕ್ಷ್ಯವನ್ನು ನನ್ನ ಉಕ್ತ ಲೇಖನದಂತೆ ಬಹಿರಂಗ ನ್ಯಾಯಾಲಯದಲ್ಲಿ ಗಣಕೀಕರಿಸಲಾಯಿತು.)

(ಮೇಲಿನ ಸಾಕ್ಷ್ಯವನ್ನು ಸಾಕ್ಷಿಗೆ ಓದಿ , ತಿಳಿಸಿ , ಹೇಳಿದಾಗ ಅವರು ಸರಿ ಇದೆ ಎಂದು ಒಪ್ಪಿದ್ದಾರೆ).

(ಸಂಧ್ಯಾ ರಾವ್ ಪಿ.),
ಅಧ್ಯಕ್ಷಾಧಿಕಾರಿಗಳು/ಜಡ್ಜ್
ಇ.ಎಸ್.ಐ.ನ್ಯಾಯಾಲಯ,
ಮೈಸೂರು.